ಕಾದಂಬರಿ ನಮ್ಮೆದುರಿಗಿದೆ. 'ಪಟ್ಟ ಪಾಡೆಲ್ಲವನ್ನೂ ಹುಟ್ಟು ಹಾಡಾಗಿಸುವ' ಸಹಜ ಕವಿಗಳ ರಚನೆಗಳಲ್ಲಿ ಕೂಡ ಸಣ್ಣಮಟ್ಟದಲ್ಲಾದರೂ ಒಳಎಡಿಟಿಂಗ್ ಇರಲೇ ಬೇಕಾಗುತ್ತದೆ. ಮಾರ್ಕ್ವೆಜ್‌ನಂಥ ದೊಡ್ಡ ಕಥೆಗಾರ ತನ್ನ ಕೃತಿಯೊಂದರ ಕಾಪಿ ಎಡಿಟರ್ ಕಳಿಸಿದ ವಿಭಿನ್ನ ಕಾಪಿಗಳನ್ನು ಓದಿ, ಅನಂತರ ಮಾಡಿದ್ದ ಹಲವು ತಿದ್ದುಪಡಿಗಳನ್ನು ನೋಡಿ ಈ ಮಾತು ಹೇಳುತ್ತಿರುವೆ. ಸೃಜನಶೀಲ ಬರವಣಿಗೆಯ ಬಹುಪಾಲು ಭಾಗದಲ್ಲಿ ವಿಮರ್ಶೆಯ ಶ್ರಮವೇ ಅಡಗಿರುತ್ತದೆ ಎಂದ ಎಲಿಯಟ್ ಮಾತಿನ ಸತ್ಯ ಬರೆವ ಬದುಕಿನ ಎಲ್ಲರಿಗೂ ನಿತ್ಯ ಪಾಠದಂತಿದೆ.

ಕೊರೋನಾ ಹೇರಿದ ಕಡ್ಡಾಯ ಏಕಾಂತದ ಕಾಲದಲ್ಲಿ ಬರೆದ ಸಾವಿರ ಪುಟಗಳ 'ಹೊಕ್ಕುಳು' ಕಾದಂಬರಿಯ ಹೊತ್ತಿಗೆ ನಿರೂಪಣೆಯ ಸ್ವಚ್ಛಂದ ಹರಿವು; ಅನಂತರ ಸಾವಿನ ಆತಂಕದ ದಿನಗಳಲ್ಲಿ ಪ್ರತಿ ದಿನ ಬರೆದ ಆತ್ಮಕತೆಯಲ್ಲಿ ಕಾದಂಬರಿಯ ವಿವರಗಳ ಪುನರಾವರ್ತನೆ ಇವೆರಡೂ ಮತ್ತೊಂದು ಥರದ ಸವಾಲನ್ನು ಮೊಗಳ್ಳಿಗೆ ತಂದೊಡ್ಡಿದ್ದವು. ಆ ಕಥೆಯನ್ನು ಮೊಗಳ್ಳಿಯ ಮಾತಿನಲ್ಲೇ ಕೇಳಿ: 'ನನ್ನ ಬಾಲ್ಯದ ಎಷ್ಟೋ ಸಂಗತಿಗಳು ಮೊದಲು ಬರೆದಿಟ್ಟದ್ದ ಈ ಕಾದಂಬರಿಯಲ್ಲಿ ಥಾಳಾಗಿ ಬಂದುಬಿಟ್ಟದ್ದವು. ಒಂದೇ ಅನುಭವವನ್ನು ಹಂಚಿ ಬರೆಯಬೇಕಾಯಿತು. ಮತ್ತೆ ಯಡವಟ್ಟಾಯಿತು. ರಿಪೀಟೆಡ್ ಸಂಗತಿಗಳ ತೆಗೆಯಬೇಕಾಯಿತು.'



ಕಾದಂಬರಿ ಹಾಗೂ ಆತ್ಮಕತೆ ಪರಸ್ಪರ ಹತ್ತಿರ ಇರುವ ಪ್ರಕಾರಗಳು. ಬರವಣಿಗೆಗೆ ಇಳಿದಾಗ ಆತ್ಮಕತೆ ಕೂಡ 'ಫಿಕ್ಷನ್' ಆಗುವ ಸವಾಲನ್ನು ಹಲವರು ಎದುರಿಸಿದ್ದಾರೆ. ಬರೆಯುವ ವ್ಯಕ್ತಿಯೇ ಕೇಂದ್ರ ಪಾತ್ರವಾಗುವ ಆತ್ಮಕತೆ ಪ್ರಕಾರ ಕಾದಂಬರಿಯತ್ತ ವಾಲುವುದು ಸಹಜ. ಆತ್ಮಕತೆಗಾರ ಕಥೆ, ಕಾದಂಬರಿ ಬರೆಯುವ ಲೇಖಕನಾಗಿದ್ದಾಗಲಂತೂ ಈ ವಾಲುವಿಕೆ ಇನ್ನಷ್ಟು ಹೆಚ್ಚಾಗುತ್ತದೇನೋ! ಕಥೆ, ಕಾದಂಬರಿ ಬರೆಯದ ಗಾಂಧೀಜಿಯ ಆತ್ಮಕತೆ, ಅಂಬೇಡ್ಕರ್ ಬರೆದ 'ವೆಯ್ಟಿಂಗ್ ಫಾರ್ ಎ ವೀಸಾ' ಎಂಬ ಆತ್ಮಕತೆಯ ತುಣುಕು, ಅಥವಾ ತೀವ್ರ ಸ್ವ-ಪರೀಕ್ಷೆಯೇ ಆತ್ಮಚರಿತ್ರೆ ಎಂದು ನಂಬಿ ಬರೆದವರ ಆತ್ಮಚರಿತ್ರೆಗಳು ಮಾತ್ರ ಕಾದಂಬರೀಕರಣದ ಧಾಟಿಯಿಂದ ತಪ್ಪಿಸಿ ಕೊಳ್ಳಬಲ್ಲವು. ಜೀವಮಾನವಿಡೀ ಕಥೆ, ಕಾದಂಬರಿ ಬರೆದ ಮೊಗಳ್ಳಿ ಕೊನೆಯ ಘಟ್ಟದಲ್ಲಿ ಕಾದಂಬರಿ, ಆತ್ಮಕತೆ ಎರಡನ್ನೂ ಒಟ್ಟೊಟ್ಟಿಗೇ ನಿಭಾಯಿಸಬೇಕಾದ ಕಾಲ ಬಂತು; ಅಲ್ಲಿ ಅನುಭವಗಳ ಹಂಚಿಕೆಯ ಸವಾಲು, ಗೊಂದಲ, ಎಡಿಟಿಂಗ್ ಸಮಸ್ಯೆ ಎಲ್ಲವೂ ಎದುರಾಗಿದ್ದು ಸಹಜವಾಗಿತ್ತು.

ತನ್ನ ಕಥೆ, ಕಾದಂಬರಿಗಳಲ್ಲಿ ತನ್ನ ಸ್ವಂತ ಕಥೆಯನ್ನೇ ಬರೆಯುತ್ತಿದ್ದೇನೆ ಎಂದು ಮತ್ತೆ ಮತ್ತೆ ಹೇಳಿಕೊಂಡಿದ್ದ ಗಣೇಶ್ 'ನಾನೆಂಬುದು ಕಿಂಚಿತ್ತು' ಆತ್ಮಕತೆ ಬರೆಯುವ ಹೊತ್ತಿಗೆ ಯಾವ ಅನುಭವ ಮುಖ್ಯ, ಯಾವುದು ಅಮುಖ್ಯ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಭಾವನೆಗಳ ಸ್ವಚ್ಛಂದ ಉಕ್ಕುವಿಕೆಯಲ್ಲೇ ಬರೆದಂತಿದೆ. ಇದನ್ನು 'ಸೃಜನಶೀಲ ಬಣ್ಣಗಳಲ್ಲಿ ಬರೆದಿರುವೆ', 'ವಾಸ್ತವವಾದ ಅನುಭವಗಳನ್ನೆ ಮಾಂತ್ರಿಕ ನಿರೂಪಣೆಯ ಲಯಕ್ಕೆ ತಂದುಕೊಂಡು ರೂಪಾಂತರಿಸಿ ಬರೆದೆ' ಎಂದು ಕೂಡ ಆತ್ಮಕತೆಗಾರನ ಮುನ್ನುಡಿ ಹೇಳುತ್ತದೆ. ಈ ನಡುವೆಯೂ, ಇಲ್ಲಿ ಒಂದು ಕಾಲದ ಅಗೋಚರ ಚರಿತ್ರೆ ದಾಖಲಾಗಿದೆಯೆಂಬುದನ್ನು ಮರೆಯಲಾಗದು.

'ನಾನೆಂಬುದು ಕಿಂಚಿತ್ತು' ಎಂಬ ಹೆಸರಿನಲ್ಲಿ ಒಂದು ಬಗೆಯ 'ವಿನಯ'ದ ಜೊತೆಗೆ, 'ನಾನೇನೂ ಕಿಂಚಿತ್ ಅಲ್ಲ, ಕಿಲಾಡಿಯೇ!' ಎಂಬ ಧ್ವನಿ ಮೊಗಳ್ಳಿಯ ಚಾರ್ಲಿ ಚಾಪ್ಲಿನ್ ವರಸೆಗಳನ್ನು ಬಲ್ಲ ಗೆಳೆಯರಿಗೆಲ್ಲ ಕೇಳಿಸಿದರೆ ಅಚ್ಚರಿಯಲ್ಲ! ನನ್ನನ್ನೂ ಒಳಗೊಂಡಂತೆ ಹತ್ತಾರು ಗೆಳೆಯರಿಗೆ ಮೊಗಳ್ಳಿ ಹೇಳುತ್ತಿದ್ದ ಯೂನಿವರ್ಸಿಟಿ ಕ್ಯಾರಕ್ಟರ್ಸ್-ಸಾಹಿತ್ಯ-ಸಾಹಿತಿಗಳ ರಾತ್ರಿ ಪರಸಂಗಗಳಲ್ಲಿ 'ಕೊನೆಗೂ ತಾನೇ ಗೆದ್ದೆ' ಎಂಬ ದನಿಯೇ ಎದ್ದು ಬರುತ್ತಿದ್ದುದನ್ನು ಕೇಳುಗರು ಸಾಮಾನ್ಯವಾಗಿ ಗಮನಿಸಿರುತ್ತಾರೆ! ಸಮಾಜದಲ್ಲಿ ಬಗೆಬಗೆಯ ಕಷ್ಟ, ಅವಮಾನಗಳನ್ನು ಹಾದುಹೋದ ಲೇಖಕನೊಬ್ಬ ರಾತ್ರಿಯ ಖಾಸಗಿ ಪರಸಂಗಗಳಲ್ಲಿ ಗೆಲುವು ಹುಡುಕುವುದು ಒಂಥರದ ಮನೋನಿರಾಳತೆ ಪಡೆವ ಮಾರ್ಗವೂ ಹೌದು! ಈ